ಅಂದಿದ್ದ. ಅವನ ಮೆಸೇಜ್ ಕೂಡ ತಲೆ ಕೆಡಿಸಿತು. ಈ ಪ್ರದೀಪ ಒಳ್ಳೆಯ ಗೆಳೆಯ, ನನ್ನಿಂದ ಬಹಳಷ್ಟು ಬರೆಸಿಕೊಂಡವನು. ಅವನು ಸುಮ್ಮನೆ ಹೇಳುವುದೇ ಒಂದು ಅಪ್ಪಣೆಯಂತೆ ಇರುತ್ತಿತ್ತು. ಆ ಅಕ್ಕರೆಯ ಗೆಳೆಯನ ಮಾತು ನಡೆಸಿಕೊಡುವುದರಲ್ಲಿ ಒಂದು ಖುಷಿಯಿತ್ತು. ಹಾಗೆ ನೋಡಿದರೆ ಅವನು ನನಗಿಂತ ಚೆಂದಗೆ ಬರೆಯುವ ಕತೆಗಾರ. ಆದರೆ ಪತ್ರಿಕೆಯೊಂದರ ಉತಾವಳಿ ಹಚ್ಚಿಕೊಂಡವನು. ಕತೆ, ಕವಿತೆಗೆಲ್ಲ ಸಮಯಕೊಡಲಾಗದೆ ಪತ್ರಿಕೆ ಕಟ್ಟುವುದರಲ್ಲಿ ಬ್ಯುಸಿಯಾಗಿದ್ದ. ಅವನು ಬರೆಯುವುದನ್ನ ನಿಲ್ಲಿಸಿದ್ದಾನೆಂದು ನನ್ನಂತೆಯೆ ಅವನ ಅನೇಕ ಗೆಳೆಯರು ಆಕ್ಷೇಪ ಎತ್ತಿದ್ದರೂ ಅವನು ಅದಕ್ಕೆಲ್ಲ ತಲೆಕೆಡಿಸಿಕೊಳ್ಳುವ ಗೋಜಿಗೆ ಹೋಗದೆ ತನ್ನಷ್ಟಕ್ಕೆ ಇರುತ್ತಾ ತೀರ ಮನಸ್ಸಾದರೆ ಆಗೀಗೊಂದು ಕತೆಯನ್ನೋ ಕವಿತೆಯನ್ನೋ ಬರೆಯುತ್ತಿದ್ದ. ಈ ಅಣ್ಣಯ್ಯನೆಂಬ ವ್ಯಕ್ತಿ ನನ್ನನ್ನು ಯೋಚನೆಯ ಸೆರೆಯಿಂದ ಬಿಡಿಸಿದಾಗ ನಾನು ಪ್ರದೀಪನ ಬಗೆಯೇ ಯೊಚಿಸುತ್ತಿದ್ದೆ. ಇದೇ ಮೊದಲಬಾರಿ ಅವನು ಕೊಟ್ಟ ಗಡುವು ದಾಟಿ ಇನ್ನೂ ಏನನ್ನೂ ಬರೆಯದೆ ಕುಳಿತಿದ್ದೆ. ಕಳೆದ ಕೆಲದಿನಗಳಿಂದ ಈಶಾನ್ಯೆಯೊಂದಿಗೆ ಆನ್‌ಲೈನ್ ರೊಮಾನ್ಸ್ ತುಸು ಜೋರಾಗೇ ನಡೆಸಿದ್ದೆ. ನೀಲಿಮಾಳ ಎದುರು ಅವಳು ಸಣ್ಣವಳು ಸಣ್ಣವಳು ಅಂತ ಬಾರಿಬಾರಿಗೂ ಅಂದಿದ್ದೆನಾದರೂ ಅವಳೇನೂ ನಿಜದಲ್ಲಿ ಸಣ್ಣವಳಾಗಿರಲಿಲ್ಲ. ಅದೇ ಸಮಯ ಅವಳಿಗೆ ನನ್ನ ಮೇಲಿರುವುದು ಇನ್‌ಫ್ಯಾಚುವೇಷನ್ ಮಾತ್ರವೇ ಅಂತ ನಂಗೂ ಅನಿಸ್ತಾ ಇರಲಿಲ್ಲ. ಅದನ್ನೂ ದಾಟಿ ನಂಗೂ ಅವಳ ಬಗ್ಗೆ ಭಾವನೆಗಳು ಏನೂ ಇಲ್ಲವೆಂದರೆ ಸುಳ್ಳಾದೀತು. ಇಂಥದ್ದೇ ಹೀಗೇ ಇಷ್ಟೇ ಅಂತ ಷರಾ ಬರೆದು ಮುದ್ರೆಯೊತ್ತುವಷ್ಟು ಸ್ಪಷ್ಟತೆ ನನ್ನ ಭಾವನೆಗಳಿಗೆ ಇರಲಿಲ್ಲವಾದರೂ ಅದಕ್ಕೆ ಪ್ರೇಮಕ್ಕಿರುವ ಕಾವಿತ್ತು. ಅವಳೆಡೆಗೆ ಒಂದು ಸೆಳೆತ ತುಡಿತ ಎರಡೂ ಇತ್ತು. ಅವಳ ಮೆಸೇಜ್ ಬಂದಾಗ ಒಂದು ಉಲ್ಲಾಸ ತೂರಿ ಬಂದು

